ಹುಚ್ಚೋ. "ಹಗಲೆಲ್ಲ ಪ್ರೋಗ್ರಾಂ ಬರೆ ಬರೆದು ಕಂಪನಿಯ ಹಣ ಬೆಳೆಸ್ತೀಯಾ, ಸಂಜೆಗೆ ಈ ತೋಟ ಬೆಳಸ್ತೀಯಾ" ಅಂತ ತಮಾಷೆ ಮಾಡಿದರೆ, "ಕಂಪನಿಯ ಮಾತು ಬಿಡು, ಅದು ಹೊಟ್ಟೆಯ ಪಾಡು. ಆದರೆ ಬೀಜ ನೆಟ್ಟು ನಿತ್ಯ ಸಸಿ ಬಂತಾ ಅಂತ ಕಾಯೋದು, ನೀರೆರೆದು ಬೆಳೆಸೋದರಲ್ಲಿ ಎಂಥಾ ಆನಂದವಿದೆ ಗೊತ್ತಾ?" ಎನ್ನುತ್ತ ತನ್ನ ಕಡೆ ನೋಡಿದ್ದು ನೆನಪಾಗಿ, ಈಗ್ಯಾಕೋ ಒಮ್ಮೆಲೆ ಮೈ ಜುಮ್ಮೆಂದಿತು. ಮೆಲ್ಲನೆ ತೊನೆದು ತನ್ನತ್ತ ಬಂದ ಮಲ್ಲಿಗೆ ಬಳ್ಳಿಯನ್ನು ಮೃದುವಾಗಿ ಸವರಿದಳು. ಆಗ ಮಾತ್ರ ಜಿದ್ದಿಗೆ ಬಿದ್ದವಳಂತೆ ಬರಿದೇ ಪ್ರಶ್ನೋತ್ತರಗಳಲ್ಲೇ ಗುದ್ದಾಡಿದ್ದು ನೆನಪಾಯ್ತು. "ಗಿಡಗಂಟಿಗಳೇನೋ ಸರಿ, ಹಸಿರು ಇರಬೇಕು ಮನೆಯ ಸುತ್ತಾ. ಆದರೆ ಇದೆಲ್ಲಾ ಕಲ್ಲು ಯಾಕ್ಹಾಕಿದ್ದೀಯೇ ಮಧ್ಯ ಮಧ್ಯ?" ಅಂದಾಗ ಮೌನವಾಗಿ ದಿಟ್ಟಿಸಿದ್ದ.

"ಈ ಕಪ್ಪು ಚಪ್ಪಟೆಕಲ್ಲು, ಗುಂಡು ನುಣುಪುಗಲ್ಲುಗಳ ರಾಶಿ ಯಾಕೇಂತ ತೋಟದ ನಟ್ಟನಡುವೆ?" ಮಾತುಗಳ ನಡುವಿನ ಚೂರು ಮೌನಕ್ಕೆ ಅಸಹನೆಯಾಗಿ ಮತ್ತೆ ಕೇಳಿದ್ದಳು.

ದೊಡ್ಡ ಚೌಕು ಕಲ್ಲನ್ನೆತ್ತಿ ತೋರಿಸುತ್ತಾ, "ಮಾವನ ಮನೆಯ ಹಿತ್ತಿಲಿನ ನಳದ ಕೆಳಗಿನ ಕಲ್ಲಿದು. ಆಗೆಲ್ಲಾ ದಿನಾ ಬೆಳಿಗ್ಗೆ ಏಳಕ್ಕೇ ಕಾಲೇಜಿರೋದು ನಂಗೆ. ಆವಾಗ್ಲೇ ಮಾವನೂ ಫ್ಯಾಕ್ಟರಿಗೆ ಹೋಗಬೇಕು, ದೀಪೂದು ಆವಾಗಲೇ ಕ್ಲಾಸು. ಯಾರಿಗ್ಯಾಕೆ ತೊಂದ್ರೆ ಅಂತ ದಿನಾ ಹಿತ್ತಲಲ್ಲಿ ತಣ್ಣೀರೇ ನಾ ಸ್ನಾನ ಮಾಡ್ತಿದ್ದುದು. ಕಲ್ಲಿನ ಕುಳಿಯನ್ನು ಸವರುತ್ತಾ ಈ ಆಳವಾದ ಕಚ್ಚು ವರ್ಷಗಟ್ಟಲೆ ಒಂದೇ ಸಮನೆ ಸುರಿದ ನೀರಧಾರೆಯಿಂದ ಆದದ್ದು ಅಂದ್ರೆ ನಂಬ್ತೀಯಾ? ಕಲ್ಲಂಥಾ ಕಲ್ಲನ್ನೇ ಕರಗಿಸುತ್ತೆ ನೋಡು ಮೃದು ನೀರಧಾರೆ" ಅಂದು ಭಾವುಕನಾಗಿದ್ದ.

"ಮತ್ತೆ ಈ ಗುಂಡುಕಲ್ಲುಗಳು?"

"ಸಮುದ್ರ ದಂಡೆಯವು. ನೀನ್ಯಾವಾಗಾದ್ರೂ ಬೆಟ್ಟದ ಕಲ್ಲುಗಳು ಯಾಕೆ ಚೂಪು ಚೂಪು ಸಾಗರ ದಂಡೆಯವು ಮಾತ್ರ ನುಣುಪು ಅಂತ ಯೋಚಿಸಿದ್ದೀಯಾ? ಬೆಟ್ಟಗಳಿಂದಿಳಿವ ನದಿಗಳು ತಮ್ಮೊಟ್ಟಿಗೆ ಕಲ್ಲುಗಳ ರಾಶಿಯನ್ನೇ ತರುತ್ತವೆ. ಅವಕ್ಕೆಲ್ಲ ಹರಿತ ಮೊನೆಗಳೇ ಇರೋದು. ಆದ್ರೆ ಹಾದಿಯ ಹೊಡೆತಗಳಿಗೆ ತುದಿ ಮೊಂಡಾಗುತ್ತಾ ಭೂಮಿಯ ಕಟ್ಟ ಕಡೆಯ ಮಟ್ಟ ಅಂದ್ರೆ ಕಡಲಿಗೆ ಬರೋ ಹೊತ್ತಿಗೆ ನುಣುಪಾಗಿ ಉರುಳುರುಳಿ ಎಲ್ಲ ಒಂದೆಡೆ ಗುಂಪಾಗುತ್ವೆ" ಅಂದವ, "ಮನುಷ್ಯನ ಬಾಳೂ ಹೀಗೇಯೇ ಅಲ್ವಾ? ನಾನೆಂದರೇನು? ನನ್ನ ಮುಂದೆ ಇವರೇನು?" ಅಂತೆಲ್ಲ ಚೀರುವ ಅಹಂಕಾರದ ಚೂಪುತುದಿಗಳು ಬರ್ತಾಬರ್ತಾ ಮೊಂಡಾಗಿ ಕೊನೆಗೆ, "ಮುದುಕರಾಗೋ ಹೊತ್ತಿಗೆ ಪಕ್ಕದಲ್ಲಿ ಕೂತು ಮಾತಾಡಿಸುವ ಜೀವವೊಂದು ಸಿಕ್ಕೀತಾ? ಅನ್ನೋ ಮಟ್ಟಕ್ಕೆ ಬರ್ತಾನೆ ಮನುಷ್ಯ. ಇವೆರಡೂ ನನಗೆ ಯಾವಾಗ್ಲೂ ಬದುಕಿನ ಪಾಠ ನೆನಪಿಸ್ಲಿಕ್ಕಿರಲಿ" ಅಂತ ನಕ್ಕಿದ್ದು ಯಾಕೋ ನಿನ್ನೆಯಂತೆ ನೆನಪಾಯ್ತು. ಹಿತ್ತಲಿನ ಬಾಗಿಲು ಮುಚ್ಚಿ ತನ್ನ ಕೋಣೆಗೆ ಹೋಗಿ ರಾತ್ರಿಯುಡಿಗೆ ಧರಿಸಬೇಕೆಂದು ಸೀರೆ ಬಿಚ್ಚಿದರೆ ಸೆರಗೆಲ್ಲ ಮಲ್ಲಿಗೆಯ ಘಮಘಮ! 'ಇನ್ಮೇಲೆ ನಿತ್ಯ ಮಲ್ಲಿಗೆ ಸಸಿಗಳಿಗೆ ದಿನಾ ನೀರೆರೆಯಬೇಕು' ಅಂದುಕೊಳ್ಳುತ್ತಾ ಕನ್ನಡಿಯ ಮುಂದೆ ನಿಂತು ಬಿಚ್ಚಿದ ಸೆರಗನ್ನು ಬಿಗಿಯಾಗಿ ಹೊದ್ದುಕೊಂಡಳು. ಹಾರಿದ ಸೀರೆಯ ಮೈ ಬಣ್ಣಕ್ಕೆ ಪ್ರತಿಬಿಂಬ ಕೆಂಪಾಯಿತು.

"ಅಮ್ಮಾವ್ರೇ ಅಮ್ಮಾವ್ರೇ" ನಿಂಗಮ್ಮನ ಧ್ವನಿ. ಓ ಸಂಜೆಗೆ ಬಾ ಒಂದಿಷ್ಟು ಸೊಪ್ಪು ಶೋಧಿಸಿ ಅಕ್ಕಿ ಆರಿಸಿಡು ಅಂದಿದ್ದು ನೆನಪಾಗಿ ಕೆಳಗಿಳಿದು ಬಂದರೆ,

"ಕಿಡಕಿಯಿಂದಾನಾ?... ನೀವೂ ಒಬ್ಬರೇ ಹಗಲೆಲ್ಲಾ ಚುಚು" ನಿಂಗಮ್ಮನ ಜೋರಿನ ಲೊಚಗುಟ್ಟುವಿಕೆ ಕೇಳಿಸಿತು.

ಅತ್ತೆ ಅವಳು ಬರುವ ಪುರುಸೊತ್ತಿಲ್ಲದಂತೆ ಕಳ್ಳನ ವರದಿ ಒಪ್ಪಿಸಿರಬೇಕು. ಯಾರೊಟ್ಟಿಗಾದ್ರೂ ಮಾತಾಡಲಿಕ್ಕೆ ಜೀವ ಚಡಪಡಿಸುತ್ತೆ ಅವರಿಗೆ. ದಿನವೆಲ್ಲಾ ನನ್ನಂತೆಯೇ ಒಂಟಿ ಅವರೂ ಪಾಪ!

